ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಬಂದಿದೆ.

ಆ) ವಾಹನ ಸಾಂದ್ರತೆ ಹೆಚ್ಚಾಗಿರುವ ಪ್ರಮುಖ ರಸ್ತೆಗಳಿಗೆ ಮತ್ತು ವಾಣಿಜ್ಯ ಪ್ರದೇಶಗಳಲ್ಲಿಯ ರಸ್ತೆಗಳ ತಗ್ಗುಗಳಿಗೆ ಮತ್ತು ಇನ್ನುಳಿದ ರಸ್ತೆಗಳಿಗೆ ಖಡಿಕಲ್ಲು ಹಾಕಿ ತೇಪೆ ಕೆಲಸ ಕೈಗೊಂಡಿದ್ದು ಮಳಿಗಾಲದ ನಂತರ ಡಾಂಬರ್ ರಿಪೇರಿ ಮತ್ತು ಡಾಂಬರೀಕರಣ ಕೆಲಸ ಏಕ ಕಾಲಕ್ಕೆ ಕೈಗೊಳ್ಳಲಾಗುವುದು.

ಹುಬ್ಬಳ್ಳಿಯ ಅಶೋಕನಗರದಲ್ಲಿ ರೈಲ್ವೆ ಅಂಡರ್‌ಬ್ರಿಡ್ಜ್ ನಿರ್ಮಾಣ.

1560 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದ ಅಶೋಕನಗರ ರೈಲ್ವೆ ಅಂಡರ್ ಬ್ರಿಡ್ಜ್ ನಿರ್ಮಾಣದ ಒಟ್ಟು ವೆಚ್ಚ ಎಷ್ಟು?

ಆ) ಅದರಲ್ಲಿ ಮಹಾನಗರ ಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ ಇವುಗಳ ಪಾಲಿನ ಹಣವೆಷ್ಟು?

ಇ) ಸದರಿ ಪಾಲಿನಲ್ಲಿ ಮಹಾನಗರ ಸಭೆ ಮತ್ತು ನಗರಾಭಿವೃದ್ಧಿ ಪ್ರಾಧಿಕಾರ ಇಲ್ಲಿಯವರೆಗೆ ಎಷ್ಟು ಹಣ ಭರಣ ಮಾಡಿರುತ್ತಾರೆ, ಯಾವಾಗ ಮಾಡಿರುತ್ತಾರೆ?

ಈ) ಸದರಿ ಕಾಮಗಾರಿ ಎಂದು ಪ್ರಾರಂಭವಾಗುವುದು ಆ ವಿವರಗಳನ್ನು ಒದಗಿಸುವುದು?

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಒಟ್ಟು ವೆಚ್ಚ ರೂ.94,62,000-00

ಆ) ರೂ. 61,11,500-00 (ಹುಬ್ಬಳ್ಳಿ -ಧಾರವಾಡ ಮಹಾನಗರ ಪಾಲಿಕೆ)

ರೂ. 45,11, 500-00,

ಹು.ಧಾ.ನ.ಅ.ಪಾ. ರೂ.15,00,000-00

ಇ) ನಗರಸಭೆ ರೂ.20.00 ಲಕ್ಷ ದಿ 22.3.97

ಪ್ರಾಧಿಕಾರ ರೂ.2.00 ಲಕ್ಷ ದಿ 23.5.95

ಈ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಒಟ್ಟು ರೂ.60.00 ಲಕ್ಷ ಹಣ ಜಮಾ ಆದ ಮೇಲೆ ಕೆಲಸ ಪ್ರಾರಂಭಿಸುವುದಾಗಿ ರೈಲ್ವೆ ಇಲಾಖೆಯು ತಿಳಿಸಿದೆ.

ಹುಬ್ಬಳ್ಳಿ ನಗರದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಮಕ್ಕಳ ಸಲುವಾಗಿ ಇರುವ ಸೈನಿಕ ಶಾಲೆ ಕುರಿತು

1561 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ನಗರದ ಹೆಗ್ಗೇರಿಯಲ್ಲಿ ಸರ್ಕಾರದಿಂದ ನಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಕ್ಕಳ ಸಲುವಾಗಿ ಇರುವ ಸೈನಿಕ ಶಾಲೆ ತರಬೇತಿ ಸಂಸ್ಥೆಯು ಆರ್ಥಿಕ ಮುಗ್ಗಟ್ಟಿನಿಂದ ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ; ಬಂದಿದ್ದಲ್ಲಿ ಸದರಿ ಸಂಸ್ಥೆಯನ್ನು ಸರಿಯಾದ ರೀತಿಯಲ್ಲಿ ನಡೆಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣಾ ರೆಡ್ಡಿ (ಸಮಾಜ ಕಲ್ಯಾಣ ಸಚಿವರು) :

ಅ) ಸದರಿ ಸ್ಥಳದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಸೈನಿಕ ಶಾಲೆ ತರಬೇತಿ ಸಂಸ್ಥೆಯನ್ನು ನಡೆಸುತ್ತಿಲ್ಲ. ಇದು ಸಮಾಜ ಕಲ್ಯಾಣ ಇಲಾಖೆಯ ಯೋಜನೆ ಆಗಿರುವುದಿಲ್ಲ. ನಗರ ಸಳಿ, ಪುರಸಭೆ ಹಾಗೂ ಗ್ರಾಮ ಪಂಚಾಯಿತಿಗಳ ಶೇಕಡ 18ರ ಅನುದಾನದಲ್ಲಿ ವಂತಿಗೆ ಪಡೆದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಒಂದು ಸಮಿತಿಯ ಮೇಲ್ವಿಚಾರಣೆಯಲ್ಲಿ ಈ ಶಾಲೆಯನ್ನು ನಡೆಸಲಾಗುತ್ತಿದೆ. ಸ್ಥಳೀಯ ಸಂಸ್ಥೆಗಳ ಶೇಕಡ 18ರ ನಿಧಿಯಿಂದ ಹಣ ಬಾರದೆ ಇರುವುದರಿಂದ ಈ ಶಾಲೆಯ ನಿರ್ವಹಣೆಗೆ ತೊಂದರೆಯಾಗಿರುತ್ತದೆ. ಈ ಶಾಲೆಯು ಸಂಪೂರ್ಣವಾಗಿ ಸ್ಥಳೀಯ ಪ್ರೇರಣೆಯಿಂದ ನಡೆಸಲಾಗುತ್ತಿದ್ದು ಜಿಲ್ಲಾಧಿಕಾರಿಗಳಿಂದ ಈದನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಹಿಂದುಳಿದ ವರ್ಗಗಳ ನಿಗಮದಿಂದ ರೂಪಿಸಿರುವ ಯೋಜನೆಗಳು.

1563 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹಿಂದುಳಿದ ವರ್ಗಗಳ ನಿಗಮದಿಂದ ರಾಜ್ಯ ಹಿಂದುಳಿದ ವರ್ಗಗಳ ನಿಗಮಕ್ಕೆ ಕಳೆದ ಮೂರು ವರ್ಷದಿಂದ ಬಂದಿರುವ ಅನುದಾನವೆಷ್ಟು?

ಆ) ಸದರಿ ಅನುದಾನವನ್ನು ಹಿಂದುಳಿದ ವರ್ಗಗಳ ನಿಗಮದ ವಿವಿಧ ಯೋಜನೆಯ ಮುಖಾಂತರ ವೆಚ್ಚ ಮಾಡಿರುವುದು ನಿಜವೇ?

ಇ) ಹಾಗಿದ್ದರೆ ಅಂತಹ ಯೋಜನೆಗಳು ಯಾವುವು, ಹಾಗೂ ಅವುಗಳ ಮುಖಾಂತರ ವೆಚ್ಚ ಮಾಡಿದ ಹಣವೆಷ್ಟು ; ಮತ್ತು ಯೋಜನೆಯ ನೀತಿ ನಿಯಮಗಳೇನು?

ಈ) ನಿಗಮದ ಮುಖಾಂತರವೇ ಸದರಿ ಹಣವನ್ನು ವೆಚ್ಚ ಮಾಡಲು ಸಾಧ್ಯವಿಲ್ಲವೇ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಹಿಂದುಳಿದ ವರ್ಗಗಳ ಹಣಕಾಸು ಮತ್ತು ಅಭಿವೃದ್ಧಿ ನಿಗಮವು ಮಂಜೂರು ಮಾಡಿದ ಹಣ ಮತ್ತು ಬಿಡುಗಡೆ ಮಾಡಿದ ಹಣದ ವಿವರ ಈ